ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ
(ಎಂಟನೇ ಅಧಿವೇಶನ)

ಕಾರ್ಯಕಲಾಪಗಳ ಪಟ್ಟಿ

ಮಂಗಳವಾರ, ದಿನಾಂಕ 14ನೇ ಜುಲೈ, 2015
(ಸಮಯ: ಬೆಳಗ್ಗೆ 11.00 ಗಂಟೆಗೆ)

-----

1. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಹನ್ನೆರಡನೇ ಪಟ್ಟಿ

ಆ) ದಿನಾಂಕ 10.07.2015ರ ಹತ್ತನೇ ಪಟ್ಟಿಯಿಂದ ವರ್ಗಾವಣೆಗೊಂಡ ಶ್ರೀ ಪಿ.ಎಂ. ನರೇಂದ್ರಸ್ವಾಮಿ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 136(1405) : ನಗರಾಭಿವೃದ್ಧಿ ಸಚಿವರು

ಇ) ದಿನಾಂಕ 30.06.2015ರ ಎರಡನೇ ಪಟ್ಟಿಯಿಂದ ತಡೆಹಿಡಿಯಲಾದ ಡಾ॥ ಕೆ. ಶ್ರೀನಿವಾಸಮೂರ್ತಿ ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 06(96) : ಮುಖ್ಯಮಂತ್ರಿಯವರು

ಈ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಹನ್ನೆರಡನೇ ಪಟ್ಟಿ

2. ವರದಿಗಳನ್ನೊಪ್ಪಿಸುವುದು

1. ಶ್ರೀ ಕೆ. ಗೋಪಾಲ ಪೂಜಾರಿ (ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ) ಅವರು 2014-15ನೇ ಸಾಲಿನ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿಯ ಹತ್ತನೇ ವರದಿಯನ್ನೊಪ್ಪಿಸುವುದು.

2. ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ (ಅಧ್ಯಕ್ಷರು, ಸಾರ್ವಜನಿಕ ಉದ್ಯಮಗಳ ಸಮಿತಿ) ಅವರು 2014-15ನೇ ಸಾಲಿನ ಸಾರ್ವಜನಿಕ ಉದ್ಯಮಗಳ ಸಮಿತಿಯ ನೂರ ಮೂವತ್ತೊಂದನೆ (131ನೇ) ವರದಿಯನ್ನೊಪ್ಪಿಸುವುದು.

ಪು.ತಿ.ನೋ.,.

3. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಶ್ರೀಯುತರುಗಳಾದ ಜಗದೀಶ್ ಶೆಟ್ಟರ್, ಗೋವಿಂದ ಎಂ.ಕಾರಜೋಳ, ಬಸವರಾಜ ಬೊಮ್ಮಾಯಿ, ಲಕ್ಷ್ಮಣ ಸಂಗಪ್ಪ ಸವದಿ, ಎ.ಎಸ್. ಪಾಟೀಲ್(ನಡಹಳ್ಳಿ), ಎನ್.ಹೆಚ್. ಕೋನರಡ್ಡಿ ಹಾಗೂ ಇತರರು ಹೈದ್ರಾಬಾದ್-ಕರ್ನಾಟಕ ಕಲಂ-371(ಜೆ) ಹಾಗೂ ಡಾ॥ ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿ ಸಮರ್ಪಕವಾಗಿ ಅನುಷ್ಠಾನವಾಗದೇ ಇರುವುದರಿಂದ ಉತ್ತರ ಕರ್ನಾಟಕದ 13 ಜಿಲ್ಲೆಗಳಿಗೆ ಅನ್ಯಾಯವಾಗುತ್ತಿರುವ ವಿಷಯದ ಬಗ್ಗೆ ನೀಡಿರುವ ಸೂಚನೆಯ ಮೇಲೆ ನಡೆದ ಚರ್ಚೆಗೆ **ಸರ್ಕಾರದ ಉತ್ತರ.**

4. ವಿತ್ತೀಯ ಕಾರ್ಯಕಲಾಪಗಳು

ಅ) 2015-16ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಯ ಮೇಲೆ ಚರ್ಚೆ, ಸರ್ಕಾರದ ಉತ್ತರ ಮತ್ತು ಮತಕ್ಕೆ ಹಾಕುವುದು;

ಬೇಡಿಕೆ ಸಂಖ್ಯೆ	ಬೇಡಿಕೆಯ ಹೆಸರು
21	**ಜಲಸಂಪನ್ಮೂಲ**

ಆ) 2015-16ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ ಮತ್ತು ಚರ್ಚೆ;

ಬೇಡಿಕೆ ಸಂಖ್ಯೆ	ಬೇಡಿಕೆಗಳ ಹೆಸರು
03	ಆರ್ಥಿಕ
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
18	ವಾಣಿಜ್ಯ ಮತ್ತು ಕೈಗಾರಿಕೆ
24	ಇಂಧನ
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವೆಗಳು
17	ಶಿಕ್ಷಣ
02	ಪಶುಸಂಗೋಪನೆ ಮತ್ತು ಮೀನುಗಾರಿಕೆ
27	ಕಾನೂನು
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ

ಪು.ತಿ.ನೋ.,.

08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ
14	ಕಂದಾಯ
05	ಒಳಾಡಳಿತ ಮತ್ತು ಸಾರಿಗೆ
16	ವಸತಿ
19	ನಗರಾಭಿವೃದ್ಧಿ
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ
10	ಸಮಾಜ ಕಲ್ಯಾಣ
15	ಮಾಹಿತಿ ತಂತ್ರಜ್ಞಾನ
26	ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ
13	ಆಹಾರ ಮತ್ತು ನಾಗರೀಕ ಸರಬರಾಜು
06	ಮೂಲಭೂತ ಸೌಕರ್ಯ ಅಭಿವೃದ್ಧಿ
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
25	ಕನ್ನಡ ಮತ್ತು ಸಂಸ್ಕೃತಿ
23	ಕಾರ್ಮಿಕ

5. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2015
ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು) ಅವರು;

ಅ) 2015ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

(ii) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕ, 2015
ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) ಅವರು;

ಅ) 2015ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

ಪು.ತಿ.ನೋ.,.

6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ಶ್ರೀಯುತರುಗಳಾದ ಹೆಚ್.ಡಿ.ಕುಮಾರಸ್ವಾಮಿ, ವೈ.ಎಸ್.ವಿ. ದತ್ತ, ಹೆಚ್.ಡಿ.ರೇವಣ್ಣ, ಡಿ.ಸಿ.ತಮ್ಮಣ್ಣ, ಎನ್.ಹೆಚ್. ಕೋನರಡ್ಡಿ ಹಾಗೂ ಇತರರು ರಾಜ್ಯದ 13 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ 15000 ಮೆಟ್ರಿಕ್ ಟನ್ ಹಾಲಿನ ಪುಡಿ ದಾಸ್ತಾನಿರುವುದರಿಂದ ಕೋಟ್ಯಂತರ ರೂಪಾಯಿಗಳು ನಷ್ಟವಾಗುತ್ತಿರುವ ಬಗ್ಗೆ ನೀಡಿರುವ ಸೂಚನೆಯ ಮೇಲೆ ಚರ್ಚೆ.

7 . ಗಮನ ಸೆಳೆಯುವ ಸೂಚನೆಗಳು

1. ಶ್ರೀ ಕೆ.ಆರ್. ರಮೇಶ್‌ಕುಮಾರ್ ಅವರು ಬೆಸ್ಕಾಂ ಪರಿಮಿತಿಯಲ್ಲಿ ಅಧಿಕೃತ ಪರವಾನಗಿ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿರುವ ತುಂಡು ಗುತ್ತಿಗೆದಾರರಿಗೆ ಉಂಟಾಗಿರುವ ಸಮಸ್ಯೆಗಳ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುವುದು.

2. ಶ್ರೀ ಪಿಳ್ಳಮುನಿಶಾಮಪ್ಪ ಅವರು ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೈರಾಪುರ ಗ್ರಾಮದಲ್ಲಿರುವ "ಅಗ್ರೋ ಸಿಂಥ್ ಕೆಮಿಕಲ್" ಕಾರ್ಖಾನೆಯನ್ನು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ರೆಡ್ ಇಂಡಸ್ಟ್ರೀ ಎಂದು ಘೋಷಿಸಿದ್ದರೂ, ಕಾರ್ಖಾನೆಯನ್ನು ಮುಚ್ಚದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

3. ಶ್ರೀ ಕೆ.ಎಂ.ತಿಮ್ಮರಾಯಪ್ಪ ಅವರು ಪಾವಗಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸೋಲಾರ್ ಪಾರ್ಕ್ ನಿರ್ಮಿಸುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುವುದು.

4. ಶ್ರೀ ಕೆ.ಜಿ. ಬೋಪಯ್ಯ ಅವರು ಕೊಡಗು ಜಿಲ್ಲೆಯಲ್ಲಿ ನೂತನವಾಗಿ ರಚನೆಗೊಂಡಿರುವ ಆರು ಗ್ರಾಮ ಪಂಚಾಯತ್‌ಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಗಮನ ಸೆಳೆಯುವುದು.

5. ಶ್ರೀಯುತರುಗಳಾದ ಹೆಚ್.ಕೆ. ಕುಮಾರಸ್ವಾಮಿ, ಹೆಚ್.ಡಿ.ರೇವಣ್ಣ, ಹಾಗೂ ಕೆ.ಎಂ.ಶಿವಲಿಂಗೇಗೌಡ ಅವರುಗಳು ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಕಟ್ಟೆಬೆಳಗುಲಿ ಬಳಿ ನಿರ್ಮಿಸಲಾಗಿರುವ ಶ್ರೀರಾಮದೇವರ ಅಣೆಕಟ್ಟು ಶಿಥಿಲಗೊಂಡಿರುವುದರಿಂದ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಿಸುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುವುದು.

6. ಶ್ರೀ ನಾರಾಯಣಗೌಡ ಅವರು ಕೆ.ಆರ್.ಪೇಟೆ ತಾಲ್ಲೂಕಿನ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅಳವಡಿಸಿರುವ ಬಯೋಮೆಟ್ರಿಕ್ ಸಿಸ್ಟಂಗಳು ಕಾರ್ಯನಿರ್ವಹಿಸದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

ಪು.ತಿ.ನೋ.,.

7. ಶ್ರೀ ಸಿ.ಟಿ.ರವಿ ಅವರು ಬೆಳವಾಡಿ ದೊಡ್ಡಕೆರೆ ನೀರು ತುಂಬಿಸುವ ಯೋಜನೆಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವ ಬಗ್ಗೆ ಮಾನ್ಯ ಸಣ್ಣ ನೀರಾವರಿ ಸಚಿವರ ಗಮನ ಸೆಳೆಯುವುದು.

8. ಶ್ರೀ ಟಿ.ರಘುಮೂರ್ತಿ ಅವರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಹಾಗೂ ಇತರೆ ತಾಲ್ಲೂಕುಗಳಲ್ಲಿ ಅನಾವೃಷ್ಟಿಯಿಂದಾಗಿ ನಷ್ಟಕ್ಕೆ ಒಳಗಾದ ರೈತರಿಗೆ ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ಪರಿಹಾರ ಒದಗಿಸುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

9. ಶ್ರೀ ಎಂ.ಕೃಷ್ಣಾರೆಡ್ಡಿ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ನಗರ ಸಭೆಯ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯುವುದು.

10. ಶ್ರೀ ಸಿ.ಎನ್.ಬಾಲಕೃಷ್ಣ ಅವರು ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಬಾಗೂರು ಹೋಬಳಿ ನವಿಲೆ ಏತ ನೀರಾವರಿ ಯೋಜನೆಯ ಎಡ ಮತ್ತು ಬಲಭಾಗದ ನಾಲೆಗಳ ಕೊನೆಯ ಭಾಗದಲ್ಲಿರುವ ಅಚ್ಚುಕಟ್ಟು ಪ್ರದೇಶಗಳಿಗೆ ನೀರು ಸರಬರಾಜು ಆಗದಿರುವ ಬಗ್ಗೆ ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯುವುದು.

11. ಶ್ರೀ ಮಾನಪ್ಪ ಡಿ. ವಜ್ಜಲ ಅವರು 2009-10ನೇ ಸಾಲಿನ ಪ್ರಥಮ ಹಂತದ ನಗರೋತ್ಥಾನ ಯೋಜನೆಯಡಿ ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಬಾಕಿ ಅನುದಾನವನ್ನು ಬಿಡುಗಡೆ ಮಾಡದಿರುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯುವುದು.

12. ಶ್ರೀ ಜೆ.ಆರ್.ಲೋಬೋ ಅವರು ರಾಜ್ಯದಲ್ಲಿ ಮಲ ಹೊರುವ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುವುದು.

13. ಶ್ರೀ ಯು.ಬಿ.ಬಣಕಾರ ಅವರು ಹಿರೇಕೆರೂರು ತಾಲ್ಲೂಕಿನ ಹಲವು ಗ್ರಾಮಗಳಲ್ಲಿರುವ ಪ್ರಾಥಮಿಕ ಶಾಲೆಗಳಿಗೆ 2015-16ನೇ ಸಾಲಿನಲ್ಲಿ 40 ಕೊಠಡಿಗಳನ್ನು ಮಂಜೂರು ಮಾಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುವುದು.

14. ಶ್ರೀ ಹೆಚ್.ಡಿ.ರೇವಣ್ಣ ಅವರು ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿರುವ ವಾಣಿಜ್ಯ ಮಳಿಗೆಗಳ ಬಾಡಿಗೆಯನ್ನು ಪರಿಷ್ಕರಿಸುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನ ಸೆಳೆಯುವುದು.

ಪು.ತಿ.ನೋ.,

೮. ಅರ್ಧ ಗಂಟೆ ಕಾಲಾವಧಿ ಚರ್ಚೆ

ಶ್ರೀ ಗುರು ಪಾಟೀಲ ಶಿರವಾಳ ಅವರು "ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡ ಕಾಮಗಾರಿಗಳ" ಬಗ್ಗೆ ದಿನಾಂಕ: 09.07.2015ರಂದು ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಒಂಭತ್ತನೇ ಪಟ್ಟಿಯಲ್ಲಿನ ಪ್ರಶ್ನೆ ಸಂಖ್ಯೆ: 125(2900)ಕ್ಕೆ ಒದಗಿಸಿರುವ ಉತ್ತರಕ್ಕೆ ಸಂಬಂಧಿಸಿದಂತೆ ಅರ್ಧ ಗಂಟೆ ಕಾಲ ಚರ್ಚಿಸುವುದು.

ಎಂ.ಗುರುರಾಜ
ಕಾರ್ಯದರ್ಶಿ

Raj Naikgowda

ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
(http://kla.kar.nic.in/assembly/lob/lob.htm)

KARNATAKA LEGISLATIVE ASSEMBLY

FOURTEENTH ASSEMBLY

(Eighth Session)

LIST OF BUSINESS

Tuesday, the 14th July, 2015

(Time: 11.00 a.m.)

-----

1. QUESTIONS

a)	**Questions for Oral Answers**	:	**Twelfth List**
b)	Transferred Starred Question No 136(1405) from Tenth List, dated 10th July, 2015 by Sri P.M. Narendra Swamy	:	Minister for Urban Development
c)	Held Over Starred Question No. 06(96) from Second List, dated 30th June, 2015 by Dr. K . Srinivas Murthy	:	Chief Minister
d)	**Questions for Written Answers**	:	**Twelfth List**

2 . PRESENTATION OF REPORTS

1. Sri K. Gopal Poojari (Chairman, Committee on Local Bodies and Panchayat Raj Institutions) to present the 10th report of the Committee on Local Bodies and Panchayat Raj Institutions for the year 2014-2015.

2. Sri. Malikaiah Venkaiah Guttedar (Chairman, Committee on Public Undertakings) to present the 131st Report of the Committee on Public Undertakings.

P.T.O,.

3 . DISCUSSION FOR SHORT DURATION UNDER RULE 69

Reply of the Government on the notice of Sriyuths: Jagadish Shettar, Govind M. Karjol, Basavaraj Bommai, Laxman Sangappa Savadi, A.S.Patil (Nadahalli), N.H.Konareddy and others regarding injustice caused to the 13 districts of North Karnataka without proper implementation of Article 371J of Hyderabad-Karnataka and Dr: D.M.Nanjundappa report.

4 . FINANCIAL BUSINESS

a) Discussion, Reply by the Government and voting on the following Demands for Grants for the Year 2015-16.

Demand No.	Name of the Demands
21	Water Resources

b) Introduction, Discussion on the following Demand for Grants for the Year 2015-16

Demand No.	Name of the Demands
03	Finance
04	Department of Personnel and Administrative Reforms
18	Commerce and Industries
24	Energy
12	Information, Tourism and Youth Services
17	Education

P.T.O,.

02	Animal Husbandry and Fisheries
27	Law
28	Parliamentary Affair and Legislation
08	Forest, Ecology and Environment
14	Revenue
05	Home and Transport
16	Housing
19	Urban Development
22	Health and Family Welfare
10	Social Welfare
15	Information Technology
26	Planning, Statistics, Science and Technology
13	Food and Civil Supplies
06	Infrastructure Development
11	Women and Child Development
25	Kannada and Culture
23	Labour

5 . LEGISLATIVE BUSINESS

II. BILLS FOR CONSIDERATION AND PASSING

(1) The Karnataka State Civil Services (Regulation of Transfer of Agriculture Department Officers And Other Staff) Bill, 2015
Sri Krishna Byregowda (State Minister for Agriculture) to move:-

a. **that The Karnataka State Civil Services (Regulation of Transfer of Agriculture Department Officers And Other Staff) Bill, 2015 be taken into consideration;**
b. **also to move that the Bill be passed.**

(2) The Karnataka State Universities (Amendment) Bill, 2015
Sri R.V.Deshpande (Minister for Higher Education and Tourism) to move:-

a. **that The Karnataka State Universities (Amendment) Bill, 2015 be taken into consideration;**
c. **also to move that the Bill be passed.**

6 . DISCUSSION FOR SHORT DURATION UNDER RULE 69

Sriyuths: H.D.Kumaraswamy, Y.S.V.Datta, H.D.Revanna, D.C.Thamanna, N.H.Konareddy and others to raise the discussion on the notice regarding crores of rupees of loss being caused to the milk federations due to stock of 15000 metric ton of milk powder in the limits of 13 district milk federations of the States.

7 . CALLING ATTENTION NOTICES

1. Sri K.R.Ramesh Kumar, to call the attention of Hon'ble Minister for Energy regarding hardship caused due to recent policy to the contractors who are working on the basis of piece work contract by obtaining official license in BESCOM limit.
2. Sri Pilla Munishamappa to call the attention of Hon'ble Chief Minister regarding non closure of "Agro Sinth Chemical" Factory in Bhyrapur village of Vijayapura in the limits of Devanahalli Assembly constituency eventhough the Karnataka Environment Pollution Control Board has declared it as a Red Industry.
3. Sri K.M.Timmarayappa to call the attention of Hon'ble Minister for Energy regarding scheme for setting up of the solar park in the limits of Pavagada Assembly Constituency.

P.T.O,.

4. Sri K.G.Bopaiah to call the attention of Hon'ble Minister for Rural Development and Panchayath Raj regarding providing of necessary facilities to the 6 newly formulated Gramapanchayats in Kodagu district.
5. Sriyuths: H.K.Kumaraswamy, H.D.Revanna and K.M.Shivalinge gowda to call the attention of Hon'ble Minister for Major and Medium Irrigation regarding construction of bridge – cum - barrage due to dilapidated condition of Sriramadevara Anekattu built near Kattebelaguli of Holenarasipura taluk, Hassan district.
6. Sri Narayanagouda to call the attention of Hon'ble Chief Minister regarding non-functioning of bio-metric systems which are installed in the various departments of the Government in K.R.Pet taluk.
7. Sri C.T.Ravi to call the attention of Hon'ble Minister for Minor Irrigation regarding to complete the works of water filling scheme for Belavadi Doddakere expeditiously.
8. Sri T.Raghumurthy to call the attention of Hon'ble Minister for Revenue regarding providing of compensation as per the guidelines of N.D.R.F to the farmers who are suffered loss in Challakere and other taluks of Chithradurga distict.
9. Sri M.Krishnareddy to call the attention of Hon'ble Minister for Municipal Administration, Local Bodies, Public Enterprises and Minorities Welfare and Wakf regarding to evict the encroachment of Rajakaluve in the limits of Chithamani City Municipal Council in Chikkaballapura district.

P.T.O,.

10.Sri C.N.Balakrishna to call the attention of Hon'ble Minister for Major and Medium Irrigation regarding non-supply of water properly to the command areas which are in the tail end of the left and right bank canals of Navile lift irrigation scheme of Bagooru hobli coming under the limits of Shravanabelagola Assembly constituency.

11.Sri Manappa D. Vajjala to call the attention of Hon'ble Minister for Municipal Administration, Local Bodies, Public Enterprises and Minorities Welfare and Wakf regarding that even though the infrastructure and developmentalal works of Lingasuguru taluk in Raichur district taken of under first phase of Nagarothana Yojane during the year 2009-10 have been completed, the arrears amount of the grant in respect of the said works is not released.

12. Sri J.R.Lobo to call the attention of Hon'ble Minister for Hon'ble Minister for Social Welfare and Backward Classes Welfare regarding abolition of manual scavenging system completely in the State.

13.U.B.Banakar to call the attention of Hon'ble Minister of State for Primary and Secondary Education regarding sanction of 40 class rooms to primary schools in several villages of Hirekerur taluk for the year 2015-16.

14.Sri H.D.Revanna to call the attention of Hon'ble Minister for Municipal Administration, Local Bodies, Public Enterprises and Minorities Welfare and Wakf regarding revision of rent fixed in the limits of Holenarasipura Town Municipal Council.

P.T.O,.

8. HALF –AN-HOUR DISCUSSION

Sri Guru Patil Shiravala to discuss half an hour regarding replay provided to the Question No.125 (2900) of the Ninth list to be answered in the house on 09.07.2015 about "Works undertaken under Ganga Kalyana Yojane"

M.GURURAJA
Secretary

Raj Nadgouda

ವಿಧಾನಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
(http://kla.kar.nic.in/assembly/lob/lob.htm)